2018 ಕ.ತೀ.ವ 1710

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

## ಶ್ರೀ ಮಲ್ಲೇಶ್ ಮತ್ತು ಇತರರು –ವಿರುದ್ಧ– ಶ್ರೀ ಗುರುಮೂರ್ತಿ ಮತ್ತು ಮತ್ತೊಬ್ಬರು*

ಮೋಟಾರು ವಾಹನಗಳ ಅಧಿನಿಯಮ, 1988ರ 173(1)ನೇ ಪ್ರಕರಣದಡಿಯಲ್ಲಿನ ಸಂಕೀರ್ಣ ಮೊದಲ ಅಪೀಲು

ಈ ಅಪೀಲುಗಳನ್ನು, ಅಧಿಕಾರವ್ಯಾಪ್ತಿಯ ನ್ಯಾಯಾಧೀಕರಣದ ಮುಂದೆ ಮಂಡಿಸುವುದಕ್ಕೆ ಆದೇಶಿಸಿ ಅಧಿಕಾರವ್ಯಾಪ್ತಿಯ ಕೊರತೆಯ ಆಧಾರದ ಮೇಲೆ ಕ್ಲೇಮುದಾರರ ಮೂಲ ಕ್ಲೇಮು ಅರ್ಜಿಗಳನ್ನು ಎಂಎಸಿಟಿ, ಬೆಂಗಳೂರು ಇಲ್ಲಿಂದ ಹಿಂದಿರುಗಿಸಿರುವುದರಿಂದ 10.07.2013 ರಂದಿನ ಆದೇಶದ ವಿರುದ್ಧ ನಿರ್ದೇಶಿಸಲಾಗಿರುತ್ತದೆ.

ಈ ಎರಡೂ ಅಪೀಲುಗಳನ್ನು ದಾಖಲಿಸಿದ ತರುವಾಯ, ಆಫೀಸ್/ರಿಜಿಸ್ಟ್ರಿಯು ಪರಿಶೀಲನೆಯನ್ನು ಮಾಡಿದ ತರುವಾಯ, ತೀರ್ಪು ಹಾಗೂ ಐತೀರ್ಪು ಇಲ್ಲದಿರುವಲ್ಲಿ ಪೂರ್ವಭಾವಿತವಾಗಿ ಈ ಅಪೀಲುಗಳ ಊರ್ಜಿತತ್ವ ಕುರಿತು ಆಕ್ಷೇಪಣೆಯನ್ನು ಎತ್ತಿರುತ್ತದೆ.

ದಾಖಲೆಯ ಸಮೇತ ವಕೀಲರು ಹೇಳಿದ ವಿವರಣೆ ಕಚೇರಿಗೆ ತೃಪ್ತಿಕರ ವಾಗಿಲ್ಲದಿರುವುದರಿಂದ ಕಚೇರಿಯ ಆಕ್ಷೇಪಣೆಯ ಸಮರ್ಥನೀಯತೆಯ ಪರಿಗಣನೆಗಾಗಿ ಈ ಅಪೀಲುಗಳನ್ನು ಸಲ್ಲಿಸಲಾಯಿತು.

ಹಾಗಾಗಿ, ಸಂಕ್ಷಿಪ್ತವಾಗಿ ಹೇಳುವುದಾದರೆ, ಕ್ಲೇಮು ಅರ್ಜಿಯನ್ನು ಎಂಎಸಿಟಿಯು ನ್ಯಾಯನಿರ್ಣಯಿಸುವಾಗ, ಅದರ ಪಕ್ಷಕಾರರ ಹಕ್ಕುಗಳನ್ನು ನಿರ್ಧರಿಸುವಾಗ, ಸಾಮಾನ್ಯವಾಗಿ ಅಂಥ ಆದೇಶವು ಐತೀರ್ಪನ್ನು ರೂಪಿಸುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಎಂಎಸಿಟಿಯು ಕ್ಲೇಮು ಅರ್ಜಿಗಳನ್ನು ಕುರಿತಂತೆ ನ್ಯಾಯನಿರ್ಣಯಿಸುವುದಿಲ್ಲ. ಕೇವಲ ಪ್ರಾದೇಶಿಕ ಅಧಿಕಾರವ್ಯಾಪ್ತಿಯ ಕೊರತೆಯ ಆಧಾರದ ಮೇಲೆ ಸದರಿ ಅರ್ಜಿಗಳನ್ನು

*ಎಂ.ಎಫ್.ಎ. ಸಂಖ್ಯೆ: 9994/2013 (ಎಂವಿ) ಇದರೊಂದಿಗೆ ಇತರೆ ದಿನಾಂಕ 17ನೇ ಜುಲೈ, 2018.

**ಹಿಂದಿರುಗಿಸಲಾಗಿದ್ದು, ಇದರಿಂದಾಗಿ ಇದನ್ನು ನ್ಯಾಯನಿರ್ಣಯಕ್ಕಾಗಿ ಅಧಿಕಾರವ್ಯಾಪ್ತಿಯ ನ್ಯಾಯಾಧಿಕರಣಕ್ಕೆ ಹಾಜರು ಪಡಿಸಬೇಕಾಗಿರುತ್ತದೆ. ಆದ್ದರಿಂದ, ಸರ್ವೋಚ್ಚ ನ್ಯಾಯಾಲಯದ ಹಾಗೂ ಮಧ್ಯಪ್ರದೇಶ ಉಚ್ಚ ನ್ಯಾಯಾಲಯದ ಅಭಿಪ್ರಾಯಗಳ ಹಿನ್ನಲೆಯಲ್ಲಿ, ಪ್ರಶ್ನಿತ ಆದೇಶಗಳು 'ಐತೀರ್ಪು' ಎಂಬುದನ್ನು ಒಳಗೊಂಡಿರುವುದಿಲ್ಲ. ತದನುಸಾರವಾಗಿ ಅಪೀಲುಗಳು ಅಕ್ಷಮವಾಗಿರುತ್ತವೆ.**

**ಮೇಲೆ ಹೇಳಿದ ಎಲ್ಲಾ ಕಾರಣಗಳಿಗೆ ಸಂಬಂಧಿಸಿದಂತೆ ಈ ಅಪೀಲುಗಳು ವಿಫಲವಾಗಿರುತ್ತದೆ; ಆದಾಗ್ಯೂ, ಅಪೀಲುದಾರರು ಕಾನೂನಿಗನುಸಾರವಾಗಿ ತಮ್ಮ ಕುಂದುಕೊರತೆಗಳನ್ನು ಬೇರೆಕಡೆ ನಿವಾರಿಸಿಕೊಳ್ಳಲು ಮುಕ್ತರಾಗಿರುತ್ತಾರೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾದಲ್ಲಿ*** |
|---|---|
| *1. ಎಐಆರ್ (2007) ಎಸ್‌ಸಿ 2582 ಯಲ್ಲವ್ವ ಮತ್ತು ಇತರರು –ವಿರುದ್ಧ– ರಾಷ್ಟ್ರೀಯ ವಿಮಾ ಕಂ. ಮತ್ತು ಮತ್ತೊಬ್ಬರು* | *(ಉಲ್ಲೇ) 7* |
| *2. ಎಐಆರ್ 1995 ಮಧ್ಯಪ್ರದೇಶ 229 ಓರಿಯಂಟಲ್ ಇನ್ಸೂರೆನ್ಸ್ ಕಂ. –ವಿರುದ್ಧ– ಚಿಟ್ಟಮನ್ ಮತ್ತು ಇತರರು* | *(ಉಲ್ಲೇ) 7* |

ಅರ್ಜಿದಾರರ ಪರ: ಶ್ರೀ ಸುರೇಶ್ ಎಂ. ಲಾಥೂರ್, ವಕೀಲರು;
2ನೇ ಪ್ರತ್ಯರ್ಜಿದಾರರ ಪರ: ಶ್ರೀ ರವೀಶ್ ಬೆನ್ನಿ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್:**

ಈ ಎರಡೂ ಅಪೀಲುಗಳನ್ನು, ಅಧಿಕಾರವ್ಯಾಪ್ತಿಯ ನ್ಯಾಯಾಧೀಕರಣದ ಮುಂದೆ ಮಂಡಿಸುವುದಕ್ಕೆ ಆದೇಶಿಸಿ ಅಧಿಕಾರವ್ಯಾಪ್ತಿಯ ಕೊರತೆಯ ಆಧಾರದ

ಮೇಲೆ ಕ್ಲೇಮುದಾರರ ಮೂಲ ಕ್ಲೇಮು ಅರ್ಜಿಗಳನ್ನು ಎಂಎಸಿಟಿ, ಬೆಂಗಳೂರು ಇಲ್ಲಿಂದ ಹಿಂದಿರುಗಿಸಿರುವುದರಿಂದ 10.07.2013 ರಂದಿನ ಆದೇಶದ ವಿರುದ್ಧ ನಿರ್ದೇಶಿಸಲಾಗಿರುತ್ತದೆ.

2. ಈ ಎರಡೂ ಅಪೀಲುಗಳನ್ನು ದಾಖಲಿಸಿದ ತರುವಾಯ, ಆಫೀಸ್/ ರಿಜಿಸ್ಟ್ರಿಯು ಪರಿಶೀಲನೆಯನ್ನು ಮಾಡಿದ ತರುವಾಯ, ತೀರ್ಪು ಹಾಗೂ ಐತೀರ್ಪು ಇಲ್ಲದಿರುವಲ್ಲಿ ಪೂರ್ವಭಾವಿತವಾಗಿ ಈ ಅಪೀಲುಗಳ ಊರ್ಜಿತತ್ವ ಕುರಿತು ಆಕ್ಷೇಪಣೆಯನ್ನು ಎತ್ತಿರುತ್ತದೆ. ದಾಖಲೆಯ ಸಮೇತ ವಕೀಲರು ಹೇಳಿದ ವಿವರಣೆ ಕಚೇರಿಗೆ ತೃಪ್ತಿಕರವಾಗಿಲ್ಲದಿರುವುದರಿಂದ ಕಚೇರಿಯ ಆಕ್ಷೇಪಣೆಯ ಸಮರ್ಥನೀಯತೆಯ ಪರಿಗಣನೆಗಾಗಿ ಈ ಅಪೀಲುಗಳನ್ನು ಸಲ್ಲಿಸಲಾಯಿತು.

3. ಅಪೀಲುದಾರರ ಪರ ಮಾನ್ಯ ವಕೀಲರು, ಅಧಿಕಾರವ್ಯಾಪ್ತಿಯ ನ್ಯಾಯಾಧೀಕರಣಕ್ಕೆ ಸಂಬಂಧಿಸಿದ ಕ್ಲೇಮು ಅರ್ಜಿಗಳನ್ನು ಹಾಜರುಪಡಿಸಿ ತೀರ್ಪು ಹಾಗೂ ಐತೀರ್ಪು ಪಡೆದುಕೊಳ್ಳಲು ಅವುಗಳು ಹೇಗಿವೆಯೋ ಹಾಗೆ ಹಿಂದಿರುಗಿಸಿದ ಎಂಎಸಿಟಿಯ ಪ್ರಶ್ನಿತ ಆದೇಶದ ಕಾರಣದಿಂದಾಗಿ ಇವು ಅಪೀಲು ಯೋಗ್ಯವಾಗಿರುತ್ತದೆಯೆಂದು ನಿವೇದಿಸಿದ್ದಾರೆ. ಮುಂದುವರೆದು ಪರಿಶೀಲನೆಯ ತರುವಾಯ ಕಚೇರಿಯು ಪ್ರಸ್ತಾಪಿಸಿದ ಆಕ್ಷೇಪಣೆಯು ಹೆಚ್ಚಿನ ಮಟ್ಟದ ತಾಂತ್ರಿಕ ಸ್ವರೂಪದ್ದಾಗಿದೆಯೆಂದೂ, ಆದ್ದರಿಂದ ಬಾಧಿತರಿಗೆ ನ್ಯಾಯ ಒದಗಿಸಲು ಅಪೀಲನ್ನು, ಭಾರತ ಮೋಟಾರು ವಾಹನಗಳ ಅಧಿನಿಯಮ, 1988 (ಇನ್ನುಮುಂದೆ 'ಅಧಿನಿಯಮ' ಎಂದು ಕರೆಯಲಾಗಿದೆ)ರ 172(1) ಪ್ರಕರಣದಡಿಯಲ್ಲಿ ಪ್ರಶ್ನಿತ ಆದೇಶವು ಅನ್ಯಥಾ ಅಪೀಲುಯೋಗ್ಯವಾಗಿದ್ದರೂ ಹಿಂದಿನ ಗುಣಾರ್ಹತೆಗಳ ಆಧಾರದ ಮೇಲೆ ಅಂಗೀಕರಿಸ ತಕ್ಕುದೆಂದು ನಿವೇದಿಸಿದ್ದಾರೆ.

4. ಇದಕ್ಕೆ ಪ್ರತಿಯಾಗಿ, ಪ್ರಶ್ನಿಸುತ್ತಿರುವ ಪ್ರತ್ಯರ್ಜಿದಾರ–ವಿಮಾದಾರನ ಪರ ಮಾನ್ಯ ವಕೀಲರು, ಕಾನೂನಿನ ಸೃಜನೆ ಹಾಗು ಕಾನೂನು ರೂಪಿಸುವವರು ನಿರ್ದಿಷ್ಟಪಡಿಸಿದ ಮಿತಿಗಳು ಹಾಗು ಷರತ್ತುಗಳಿಗೆ ಒಳಪಟ್ಟಾಗ ಮಾತ್ರ ಮೂಲ

ಹಕ್ಕಾಗಿರುವ ಅಪೀಲಿನ ಹಕ್ಕು ಉದ್ಭವವಾಗುತ್ತದೆಂಬುದು ಕಾನೂನಿನಲ್ಲಿ ಇತ್ಯರ್ಥಗೊಂಡಂಥದ್ದಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ. ಅಧಿನಿಯಮದ 173(1)ನೇ ಪ್ರಕರಣದಡಿಯಲ್ಲಿ ನೀಡಲಾದ ಅಪೀಲುಮಾಡುವ ಹಕ್ಕು ಕೇವಲ ಐತೀರ್ಪಿಗೆ ಹಾಗೂ ಐತೀರ್ಪಾಗಿರದಂಥ ಪ್ರಶ್ನಿತ ಆದೇಶಗಳಿಗೆ ವಿರುದ್ಧವಾದುದಾಗಿದ್ದು, ಅಪೀಲುಗಳು ಅಕ್ಷಮವಾಗಿರುತ್ತವೆಂದೂ ನಿವೇದಿಸಿಕೊಂಡಿರುತ್ತಾರೆ. ಮುಂದುವರೆದು, ಇವರು ಕಾನೂನಿನ ಮಧ್ಯೆಪ್ರವೇಶಿಸುವಿಕೆ ಎಂಬ ನೆಪದಲ್ಲಿ ಅನ್ಯಥಾ ಅಸ್ತಿತ್ವದಲ್ಲಿರದಂಥ ಅಪೀಲು ಹೋಗುವ ಹಕ್ಕನ್ನು ನ್ಯಾಯಾಲಯವು ಸೃಜಿಸಲಾಗುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ.

5. ಪ್ರಶ್ನಿತ ಆದೇಶಗಳ ವಿರುದ್ಧ ಅಪೀಲುಗಳ ಊರ್ಜಿತತ್ವಕ್ಕೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ಪ್ರತ್ಯರ್ಜಿದಾರನ ಪರ ಮಾನ್ಯ ವಕೀಲರು, ಅಪೀಲನ್ನು ಸಲ್ಲಿಸುವ ಹಕ್ಕಿನ ಅಲಭ್ಯತೆ ಎಂದರೆ, ಇಲ್ಲಿನ ಪ್ರಶ್ನಿತ ಆದೇಶಗಳು ಪ್ರಶ್ನೆಯಿಂದ ಉನ್ಮುಕ್ತವಾಗಿವೆಯೆಂಬ ಅರ್ಥವನ್ನು ಹೊಂದಿರುವುದಿಲ್ಲ ಹಾಗೂ ಆ ಪ್ರಶ್ನೆಯು ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ಈ ನ್ಯಾಯಾಲಯದಲ್ಲಿ ನಿಹಿತವಾಗಿರುವ ರಿಟ್ ಅಧಿಕಾರ ವ್ಯಾಪ್ತಿಯಲ್ಲಿರಬಹುದಾಗಿರುತ್ತದೆ.

6. ನಾನು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಹಾಗು ಪ್ರತ್ಯರ್ಜಿದಾರ-ವಿಮಾದಾರರ ಪರ ಮಾನ್ಯ ವಕೀಲರ ಅಹವಾಲನ್ನು ಆಲಿಸಿರುತ್ತೇನೆ. ನಾನು ಅಪೀಲು ಪತ್ರಗಳನ್ನು ಹಾಗೂ ಪರಿನಿಯಮಗಳ ಪುಸ್ತಕವನ್ನು ಪರಿಶೀಲಿಸಿರುತ್ತೇನೆ.

> *ಅಧಿನಿಯಮದ 173(1)ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:*
>
> *(1) "(2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕ್ಲೇಮು ನ್ಯಾಯಮಂಡಲಿಯ ಐತೀರ್ಪಿನಿಂದ ಬಾಧಿತನಾದ ಯಾರೇ ವ್ಯಕ್ತಿಯು,*

*ಐತೀರ್ಪಿನ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:*

*ಪರಂತು, ಅಂಥ ಐತೀರ್ಪಿನ ನಿಬಂಧನೆಗನುಸಾರವಾಗಿ ಯಾವುದೇ ಮೊಬಲಗನ್ನು ಪಾವತಿ ಮಾಡುವುದರ ಬಗ್ಗೆ ಯಾರೇ ವ್ಯಕ್ತಿಯು ಉಚ್ಚ ನ್ಯಾಯಾಲಯವು ನಿರ್ದೇಶಿಸಿದ ರೀತಿಯಲ್ಲಿ ಇಪ್ಪತ್ತೈದು ಸಾವಿರ ರೂಪಾಯಿ ಅಥವಾ ಹಾಗೆ ನೀಡಿದ ಮೊಬಲಗಿನ ಶೇಕಡ ಐವತ್ತು, ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಠೇವಣಿ ಇಟ್ಟ ಹೊರತು ಅವನ ಅಪೀಲನ್ನು ಉಚ್ಚ ನ್ಯಾಯಾಲಯವು ಸ್ವೀಕರಿಸತಕ್ಕದ್ದಲ್ಲ:*

*ಮತ್ತೂ ಪರಂತು, ಸಾಕಷ್ಟು ಕಾರಣಗಳಿಂದಾಗಿ ಅಪೀಲುದಾರನಿಗೆ ಸಕಾಲದಲ್ಲಿ ಅಪೀಲು ಸಲ್ಲಿಸಲು ಸಾಧ್ಯವಾಗಲಿಲ್ಲವೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಸದರಿ ತೊಂಬತ್ತು ದಿನಗಳ ಅವಧಿ ಮುಗಿದ ಮೇಲೂ ಅಪೀಲನ್ನು ಸ್ವೀಕರಿಸಬಹುದು."*

(ಈ ಪ್ರಕರಣದ ಉಳಿದ ಉಪಬಂಧಗಳನ್ನು ನಮ್ಮ ಉದ್ದೇಶಕ್ಕೆ ಸೂಕ್ತವಾಗಿಲ್ಲದಿರುವುದರಿಂದ ನಿರಸಿತಗೊಳಿಸಲಾಗಿರುತ್ತದೆ.)

ಅಧಿನಿಯಮದಲ್ಲಿ 'ಐತೀರ್ಪು' ಎಂಬುದನ್ನು ಪರಿಭಾಷಿಸಿರುವುದಿಲ್ಲ. ಆದ್ದರಿಂದ, ಖಂಡಿತವಾಗಿ ಮ್ಯಾಜಿಸ್ಟ್ರೇಟ್‌ರ ಆದೇಶ ಕುರಿತು ಪ್ರಶ್ನೆಯು ಪರಿಗಣನೆಗೆ ಸಂಬಂಧಿಸಿದಂತೆ ಆಕಸ್ಮಾತಾಗಿ ಐತೀರ್ಪಿಗೆ ಕಾರಣವಾಗಿರುತ್ತದೆ.

7. ***ಯಲ್ಲವ್ವ ಮತ್ತು ಇತರರು –ವಿರುದ್ಧ– ರಾಷ್ಟ್ರೀಯ ವಿಮಾ ಕಂ. ಹಾಗೂ ಮತ್ತೊಬ್ಬರು***[1], ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಸದರಿ ಪ್ರಶ್ನೆಯನ್ನು

1. ಎಐಆರ್ (2007) ಎಸ್‌ಸಿ 2582

ಬೇರೊಂದು ಸಂದರ್ಭದಲ್ಲಿ ಪರಿಗಣಿಸಿದೆ. 16ನೇ ಪ್ಯಾರಾದಲ್ಲಿ, ಸರ್ವೋಚ್ಚ ನ್ಯಾಯಾಲಯವು, ಪರಿಗಣಿಸಬೇಕಾದ ಅಗತ್ಯತೆಯಿರುವಂಥ ಪ್ರಶ್ನೆಯೆಂದರೆ ಅಂಥ ವಾದ ಉದ್ಭವವಾದಾಗ ಐತೀರ್ಪಿನ ಪದಾವಳಿಯ ಅರ್ಥವು ಏನು ಎಂಬುದಾಗಿರುತ್ತದೆ ಎಂದು ಹೇಳಿರುತ್ತದೆ ................" 18 ಪ್ಯಾರಾದಲ್ಲಿ, ಸರ್ವೋಚ್ಚ ನ್ಯಾಯಾಲಯವು, ಅಧಿನಿಯಮದ 168ನೇ ಪ್ರಕರಣದ ಉಪಬಂಧಗಳ ಹಿನ್ನಲೆಯಲ್ಲಿ, ಅಧಿನಿಯಮದ 140ನೇ ಪ್ರಕರಣದಡಿಯಲ್ಲಿನ ಹಕ್ಕನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ಐತೀರ್ಪು, ಸಂಬಂಧಪಟ್ಟ ಪಕ್ಷಕಾರರನ್ನು ಅಗತ್ಯಪಡಿಸಿದ ಅವರ ವಾದಗಳನ್ನು ಸಲ್ಲಿಸಿದ್ದರೂ ಹಾಗೂ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ನೀಡಿದ್ದರೂ ಯಾವುದೇ ಸಂದೇಹ ಉದ್ಭವಿಸಿರುವುದಿಲ್ಲ. ಹಾಗೂ, ಕ್ಲೇಮುಗಳ ನ್ಯಾಯಾಧೀಕರಣವು, ಅಧಿನಿಯಮದ 140ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪೂರ್ವನಿದರ್ಶನಗಳ ಷರತ್ತುಗಳ ಸಾರಭೂತವಾಗಿದ್ದಲ್ಲಿ ಐತೀರ್ಪು ನೀಡುವುದಕ್ಕೆ ಆಧಾರವಾಗಿರುತ್ತದೆಂದು ಹೇಳುವ ಮೂಲಕ ಐತೀರ್ಪಿನ ಲಕ್ಷಣಗಳನ್ನು ಸೂಚಿಸುತ್ತದೆ.

ಪ್ರಸಿದ್ಧ ಲೇಖಕರಾದಂಥ, ಶ್ರೀ ಎ.ಕೆ. ಭಟ್‌ರವರು, ಬೆಂಗಳೂರಿನ ಸ್ವತಂತ್ರ ಪ್ರಕಾಶನವು 2018 ಫೆಬ್ರವರಿಯಲ್ಲಿ ಪ್ರಕಟಿಸಿದ "ಮೋಟಾರು ಅಪಘಾತಗಳು ಹಾಗೂ ಕ್ಲೇಮುಗಳು" ಎಂಬ ಮೊದಲ ಪ್ರಕಟಣೆಯ ಕಾನೂನು ಶ್ರೇಷ್ಠ ಪುಸ್ತಕದ 340ನೇ ಪುಟದ 7.1.1, ಪ್ಯಾರಾದಲ್ಲಿ, ಈ ಮುಂದಿನಂತೆ ಬರೆಯಲಾಗಿರುತ್ತದೆ ................"ಆದಾಗ್ಯೂ, ಐತೀರ್ಪು ಎಂದರೆ, ಅಂಥ ಕ್ಲೇಮಿನಲ್ಲಿ ಪ್ರತ್ಯರ್ಜಿದಾರ ಹಾಗೂ ವಿಮಾದಾರನ ನಡುವಿನ ಯಾವುದೇ ಕ್ಲೇಮಿನ ನಿರ್ಧರಣೆಯನ್ನು ಒಳಗೊಂಡಂತೆ ಯಾರೇ, ಎಲ್ಲಾ ಅಥವಾ ಯಾರೇ ಪ್ರತ್ಯರ್ಜಿದಾರರು ಹಾಗೂ ವಿಮಾದಾರರು ವೆಚ್ಚ ಹಾಗೂ ಬಡ್ಡಿಯೊಂದಿಗೆ ಸಂದಾಯ ಮಾಡಬಹುದಾದ ಪರಿಹಾರದ ಮೊಬಲಗನ್ನು ನಿರ್ಧರಿಸಲು ಪರಿಹಾರಕ್ಕೆ ಸಂಬಂಧಿಸಿದ ಕ್ಲೇಮಿನ ಮೇಲೆ ನ್ಯಾಯನಿರ್ಣಯಿಸುವ ನ್ಯಾಯಾಧಿಕರಣದಿಂದ ಹೊರಡಿಸುವ ಆದೇಶವೆಂದು ಹೇಳಬಹುದಾಗಿರುತ್ತದೆ.

***ಓರಿಯಂಟಲ್ ಇನ್ಸೂರೆನ್ಸ್ ಕಂ. –ವಿರುದ್ಧ– ಚಿಟ್ಟಮನ್ ಹಾಗೂ ಇತರರು***[2]**,** ಪ್ರಕರಣದಲ್ಲಿ ಮಧ್ಯ ಪ್ರದೇಶ ಉಚ್ಚ ನ್ಯಾಯಾಲಯದ ಪೂರ್ಣ ಪೀಠ (ಐವರ ನ್ಯಾಯಪೀಠ) 'ಐತೀರ್ಪಿ'ನ ಪದಾವಳಿಯ ಅರ್ಥವನ್ನು ಪರಿಗಣಿಸಿರುತ್ತದೆ.

> *12. 'ಐತೀರ್ಪು' ಎಂಬ ಪದಕ್ಕೆ ಬ್ಲಾಕ್ಸ್‌ನ ಕಾನೂನು ನಿಘಂಟಿನಲ್ಲಿ ಈ ಮುಂದಿನಂತೆ ವಿವರಿಸಲಾಗಿರುತ್ತದೆ. "ನೀಡು, ಸಮ್ಮತಿಸು, ನ್ಯಾಯ ನಿರ್ಣಯಿಸು; ಶಿಕ್ಷೆಯನ್ನು ನೀಡು ಅಥವಾ ಒಪ್ಪಿಕೊ ಅಥವಾ ನ್ಯಾಯಿಕ ನಿರ್ಧರಣೆ ...... ಮಧ್ಯಸ್ಥಿಕೆಗಾರರು ಅಥವಾ ಆಯುಕ್ತರುಗಳು ಅಥವಾ ಇತರೆ ಖಾಸಗಿ ಅಥವಾ ಹೆಚ್ಚುವರಿ ನ್ಯಾಯಿಕ ನಿರ್ಣಯಕರುಗಳು ಅವರಿಗೆ ಸಲ್ಲಿಸಿದ ವಿವಾದದ ಮೇಲೆ ನೀಡುವ ನಿರ್ಣಯ ಅಥವಾ ನಿರ್ಧರಣೆ." ಸಾಮಾನ್ಯವಾಗಿ ಅರ್ಥೈಸಿಕೊಂಡಂತೆ ಐತೀರ್ಪು ಎಂದರೆ ನ್ಯಾಯನಿರ್ಣಯವನ್ನು ಒಳಗೊಂಡ ದಸ್ತಾವೇಜು ಅಥವಾ ವಿವಾದದ ನ್ಯಾಯನಿರ್ಣಯ ಅಥವಾ ನಿರ್ಧರಣೆಗೆ ಸಕ್ಷಮವಾಗಿರುವ ವ್ಯಕ್ತಿಯಿಂದ ವಿವಾದದಲ್ಲಿನ ವಿಷಯದ ನ್ಯಾಯನಿರ್ಣಯ ಅಥವಾ ನಿರ್ಧರಣೆಯನ್ನು ಒಳಗೊಂಡ ದಸ್ತಾವೇಜೆಂದು ಅರ್ಥೈಸಿಕೊಳ್ಳಲಾಗುತ್ತದೆ. ಅಧಿನಿಯಮದ 173ನೇ ಪ್ರಕರಣದಲ್ಲಿ ಅಭಿವ್ಯಕ್ತಿಯೊಂದಿಗೆ ಸಮಾಲೋಚಿಸುವಂಥ ಯಾವುದೇ ವಿಭಿನ್ನ ಅರ್ಥವನ್ನು ಸೂಚಿಸಲು ಅಧಿನಿಯಮದ X ಅಥವಾ XII ಅಧ್ಯಾಯಗಳಲ್ಲಿ ಏನೂ ಇರುವುದಿಲ್ಲ. 140ನೇ ಪ್ರಕರಣದಡಿಯಲ್ಲಿನ ಬದ್ಧತೆಯ ನಿರ್ಧಾರವು 173ನೇ ಪ್ರಕರಣದಡಿಯಲ್ಲಿ ಪ್ರಶ್ನಿಸಬಹುದಾದಂಥ ಐತೀರ್ಪಾಗಿರುತ್ತದೆ.*

2. ಎಐಆರ್ 1995 ಮಧ್ಯಪ್ರದೇಶ 229

*13. .............. ಮೋಟಾರು ವಾಹನಗಳ ಅಧಿನಿಯಮ, 1988 ಐತೀರ್ಪನ್ನು ಪರಿಭಾಷಿಸಿರುವುದಿಲ್ಲ. ಆದ್ದರಿಂದ, ಇದು ಮೇಲಿನದಕ್ಕೆ ಉಲ್ಲೇಖಿಸಿದ ಉಪಬಂಧಗಳಲ್ಲಿ ಒಳಗೊಂಡ 'ಐತೀರ್ಪಿ'ನ ಅರ್ಥವ್ಯಾಪ್ತಿಯ ಇದರ ಸಾಮಾನ್ಯ ಅರ್ಥ ಹಾಗೂ ಸಂದರ್ಭವನ್ನು ಹೊಂದಿರುತ್ತದೆಂಬುದನ್ನು ಅನುಸರಿಸಬೇಕಾಗಿರುತ್ತದೆ. 140ನೇ ಪ್ರಕರಣದಡಿಯಲ್ಲಿನ ನಿರ್ಣಯವು ಅದರಡಿಯಲ್ಲಿನ ಪರಿಹಾರಕ್ಕೆ ಸಂಬಂಧಿಸಿದ ಕ್ಲೇಮಿನ ನಿರ್ಣಯವಾಗಿರುತ್ತದೆ. ಇದನ್ನು ಅಧಿನಿಯಮದ 166(2) ಪ್ರಕರಣದಡಿಯಲ್ಲಿ ಉದ್ದೇಶಿಸಲಾದ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ ಹೊರಡಿಸಲಾಗಿರುತ್ತದೆ. ಇದು ಕನಿಷ್ಠ ಸಂಕ್ಷಿಪ್ತವಾಗಿಯಾದರೂ ನಿರ್ಣಯಗಳ ಹಾಗೂ ಕಾರಣಗಳನ್ನು ಸೂಚಿಸಬೇಕಾಗುತ್ತದೆ. 140ನೇ ಪ್ರಕರಣದಡಿಯಲ್ಲಿನ ಕ್ಲೇಮಿನ 'ನಿರ್ಧರಣೆ'ಯ ಆರೋಪಗಳನ್ನು ಖಂಡಿತವಾಗಿ ಅಧಿನಿಯಮದ 166ನೇ ಪ್ರಕರಣ ಹಾಗೂ 173ನೇ ಪ್ರಕರಣದ ಉದ್ದೇಶಕ್ಕೆ ಸಂಬಂಧಿಸಿದ ಐತೀರ್ಪಿನ ನಿರ್ಧರಣೆಯನ್ನು ರೂಪಿಸಬೇಕಾಗಿರುತ್ತದೆ. ಅತ್ಯಂತ ಗೌರವಗಳೊಂದಿಗೆ ಗಯಾ ಪ್ರಸಾದ್ ಪ್ರಕರಣದಲ್ಲಿನ (1992 ಎಂಪಿಎಲ್‌ಜೆ 485) (ಎಫ್‌ಬಿ) ನಿರ್ಣಯವು, ಅಪೀಲು ಅಧಿನಿಯಮದ 140 ಪ್ರಕರಣದಡಿಯಲ್ಲಿನ ಪರಿಹಾರಕ್ಕೆ ಸಂಬಂಧಿಸಿದ ಕ್ಲೇಮನ್ನು ನಿರ್ಧರಣೆಗೆ ವಿರುದ್ಧವಾಗಿ ಅಧಿನಿಯಮದ 173ನೇ ಪ್ರಕರಣದಡಿಯಲ್ಲಿ ಬರುವುದಿಲ್ಲವೆಂದು ಇದು ಅಭಿಪ್ರಾಯಪಡುವಷ್ಟರ ಮಟ್ಟಿಗೆ ಉತ್ತಮ ಕಾನೂನೆಂದು ನಿರೂಪಿತವಾಗಿರುವುದಿಲ್ಲವೆಂದು ನಾವು ಅಭಿಪ್ರಾಯಪಟ್ಟಿರುತ್ತೇವೆ. ಅಧಿನಿಯಮದ 140ನೇ ಪ್ರಕರಣದಡಿಯಲ್ಲಿನ ಕ್ಲೇಮಿನ ನಿರ್ಣಯವು ಒಂದು ಐತೀರ್ಪಾಗಿದ್ದು, ಒಂದು ಅಪೀಲು ಅಧಿನಿಯಮದ 173ನೇ ಪ್ರಕರಣದಡಿಯಲ್ಲಿ ಅಂಥ ಐತೀರ್ಪಿಗೆ ವಿರುದ್ಧವಾಗಿ ಬರುತ್ತದೆ."*

8. ಹಾಗಾಗಿ, ಸಂಕ್ಷಿಪ್ತವಾಗಿ ಹೇಳುವುದಾದರೆ, ಕ್ಲೇಮು ಅರ್ಜಿಯನ್ನು ಎಂಎಸಿಟಿಯು ನ್ಯಾಯನಿರ್ಣಯಿಸುವಾಗ, ಅದರ ಪಕ್ಷಕಾರರ ಹಕ್ಕುಗಳನ್ನು ನಿರ್ಧರಿಸುವಾಗ, ಸಾಮಾನ್ಯವಾಗಿ ಅಂಥ ಆದೇಶವು ಐತೀರ್ಪನ್ನು ರೂಪಿಸುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಎಂಎಸಿಟಿಯು ಕ್ಲೇಮು ಅರ್ಜಿಗಳನ್ನು ಕುರಿತಂತೆ ನ್ಯಾಯನಿರ್ಣಯಿಸುವುದಿಲ್ಲ. ಕೇವಲ ಪ್ರಾದೇಶಿಕ ಅಧಿಕಾರವ್ಯಾಪ್ತಿಯ ಕೊರತೆಯ ಆಧಾರದ ಮೇಲೆ ಸದರಿ ಅರ್ಜಿಗಳನ್ನು ಹಿಂದಿರುಗಿಸಲಾಗಿದ್ದು, ಇದರಿಂದಾಗಿ ಇದನ್ನು ನ್ಯಾಯನಿರ್ಣಯಕ್ಕಾಗಿ ಅಧಿಕಾರವ್ಯಾಪ್ತಿಯ ನ್ಯಾಯಾಧಿಕರಣಕ್ಕೆ ಹಾಜರು ಪಡಿಸಬೇಕಾಗಿರುತ್ತದೆ. ಆದ್ದರಿಂದ, ಸರ್ವೋಚ್ಚ ನ್ಯಾಯಾಲಯದ ಹಾಗೂ ಮಧ್ಯಪ್ರದೇಶ ಉಚ್ಚ ನ್ಯಾಯಾಲಯದ ಅಭಿಪ್ರಾಯಗಳ ಹಿನ್ನಲೆಯಲ್ಲಿ, ಪ್ರಶ್ನಿತ ಆದೇಶಗಳು 'ಐತೀರ್ಪು' ಎಂಬುದನ್ನು ಒಳಗೊಂಡಿರುವುದಿಲ್ಲ. ತದನುಸಾರವಾಗಿ ಅಪೀಲುಗಳು ಅಕ್ಷಮವಾಗಿರುತ್ತವೆ.

9. ಮೇಲೆ ಹೇಳಿದ ಎಲ್ಲಾ ಕಾರಣಗಳಿಗೆ ಸಂಬಂಧಿಸಿದಂತೆ ಈ ಅಪೀಲುಗಳು ವಿಫಲವಾಗಿರುತ್ತದೆ; ಆದಾಗ್ಯೂ, ಅಪೀಲುದಾರರು ಕಾನೂನಿಗನುಸಾರವಾಗಿ ತಮ್ಮ ಕುಂದುಕೊರತೆಗಳನ್ನು ಬೇರೆಕಡೆ ನಿವಾರಿಸಿಕೊಳ್ಳಲು ಮುಕ್ತರಾಗಿರುತ್ತಾರೆ.

---